**ಒಎಸ್ ಸಂ.ಃ84/2012**
**ಡಿಡಬ್ಲ್ಯೂ ಃ 2 (ವರದಪ್ಪ)**
**ದಿನಾಂಕ 13-08-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಶ್ರೀ ಎಂಎಸ್‌ಎಂ ವಕೀಲರಿಂದ**

ನಿ ಡಿ 13 ಮತ್ತು 14ನ್ನು ನಾನು ಸೃಷ್ಠಿಸಿಕೊಂಡು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನಿ ಡಿ 13 ಮತ್ತು ನಿ ಡಿ 14 ಒಂದೇ ನಂಬರ್‌ಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿಯಲ್ಲ. ನಿ ಡಿ 13 ರ ದಾಖಲೆಯಲ್ಲಿ ದಿನಾಂಕ 11.08.2003 ರಿಂದ 23.08.2003 ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನಾನು ತೋರಿಸುತ್ತಾ ಇದ್ದೇನೆ ಎಂದು ಹೇಳುತ್ತಾರೆ. ನಿ ಡಿ 14 ರಲ್ಲಿ ದಿನಾಂಕ 11.03.2004 ರಿಂದ 20.03.2004 ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನಾನು ವೈದ್ಯರಿಗೆ ತೋರಿಸುತ್ತಿದ್ದೆ ಎಂದು ಹೇಳುತ್ತಾರೆ. 2006 ರ ದಾಖಲೆಯಲ್ಲಿ 2004 ರ ಬಗ್ಗೆ ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಈ ದಾಖಲೆಯಲ್ಲಿ ಲಕ್ಷ್ಮಮ್ಮನ ಗಂಡ ಯಾರು ಎಂದು ನಮೂದಾಗಿಲ್ಲ ಎಂದರೆ ಸಾಕ್ಷಿಯು ನಾನು ಹೇಳಿರುತ್ತೇನೆ ಎಂದು ಹೇಳುತ್ತಾರೆ. ನಿ ಡಿ 13 ಮತ್ತು 14 ಈ ಕೇಸಿನ ಲಕ್ಷ್ಮಮ್ಮನದ್ದಲ್ಲ ಬೇರೆ ಲಕ್ಷ್ಮಮ್ಮನದ್ದು ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳಲ್ಲಿ 296 ಎಂದು ಇದ್ದು ಎಲ್ಲಾ ದಾಖಲೆಗಳಿಗೂ ಒಂದೇ ನಂಬರ್ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಲಕ್ಷ್ಮಮ್ಮನಿಗೆ ಯಾವುದೇ ಕಾಯಿಲೆ ಇರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಸಾಯುವವರೆವಿಗೂ ಕಾಯಿಲೆ ಇತ್ತು.

ಲಕ್ಷ್ಮಮ್ಮನವರು ಸರ್ವೆ ನಂ.79 ರಲ್ಲಿ 5 ಎಕರೆ 11 ಗುಂಟೆ ಮತ್ತು ಸರ್ವೆ ನಂ.124/2 1 ಎಕರೆ 14 ಗುಂಟೆ ಜಮೀನುಗಳಿಗೆ ಸಂಬಂಧಿಸಿದಂತೆ ವಿಲ್ ಮಾಡಿಕೊಟ್ಟಿರುತ್ತಾರೆ. ಸಾಕ್ಷಿ ಮುಂದುವರೆದು ಮೂರು ವಿಲ್‌ಗಳನ್ನು ಒಂದೇ ದಿನ ಮಾಡಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಅಮ್ಮೇರಹಳ್ಳಿ ದೊಡ್ಡಬೈರಪ್ಪ ಮತ್ತು ಲಕ್ಷ್ಮಮ್ಮ ಇಬ್ಬರೂ ಸೇರಿ ವಿಲ್ ಬರೆದುಕೊಟ್ಟಿರುತ್ತಾರೆ. ಆ ಆಸ್ತಿಯು ಅವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ನಾನು ಯಾವುದೇ ದಾಖಲೆಗಳಿಗೆ ಓದಿ ಹೇಳಿದ ನಂತರ ಸಹಿ ಮಾಡುತ್ತೇನೆ ಎಂದರೆ ಸರಿ. ನಾನು ಒಎಸ್ ನಂ.736/2009 ಎಂದು ಕೋಲಾರದ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ನಿ ಡಿ 26 ರ ಪ್ಯಾರಾ ನಂ.4 ರಲ್ಲಿ ದಿನಾಂಕ 25.02.1999ರ ನೊಂದಾಯಿತ ವಿಲ್‌ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಈ ದಾವೆಯಲ್ಲಿ ಸಲ್ಲಿಸಿರುವ ಮುಖ್ಯವಿಚಾರಣೆಯಲ್ಲಿ ವಿಲ್‌ನಾಮೆಯನ್ನು ಮಂಜುನಾಥರವರು ತೆಗೆದುಕೊಂಡು ಹೋಗಿರುತ್ತಾರೆ ಎಂದು ಹೇಳಿದ್ದು ಒಎಸ್

ನಂ.736/2009 ರಲ್ಲಿ ವಿಲ್‌ನಾಮೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದು ಹೇಳಿದ್ದು ಇವುಗಳಲ್ಲಿ ಯಾವುದು ಸರಿ ಎಂಬ ಪ್ರಶ್ನೆಗೆ ಸಾಕ್ಷಿಯು ಮಂಜುನಾಥರವರ ಹತ್ತಿರ ಇರುವುದು ಸರಿ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನಮ್ಮ ವಕೀಲರು ಆ ಕೇಸಿನಲ್ಲಿ ಗೊಂದಲ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ.

ಲಕ್ಷ್ಮಮ್ಮನಾಗಲೀ ಬೈರಪ್ಪನಾಗಲೀ ಯಾವುದೇ ಸಹಿ ಮಾಡಿಲ್ಲ ಮೂಲ ವಿಲ್‌ನಾಮೆಯನ್ನು ಕೊಟ್ಟಲ್ಲಿ ನಿಜ ಸಂಗತಿ ಹೊರಬರುತ್ತದೆ ಎಂದು ಅದನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಮಂಜುನಾಥರವರು ವಿಲ್‌ನಾಮೆಯನ್ನು ತೆಗೆದುಕೊಂಡು ಹೋಗಿದ್ದಲ್ಲಿ ಒಎಸ್ ನಂ.736/2009 ರಲ್ಲಿ ಹೇಳಿರುತ್ತಿದ್ದೆ ಆದ್ದರಿಂದ ಅವರು ಅದನ್ನು ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನನ್ನನಾಗಲೀ ನನ್ನ ತಮ್ಮನನ್ನಾಗಲೀ ದತ್ತು ತೆಗೆದುಕೊಂಡು ಸಾಕಿಕೊಂಡಿಲ್ಲ ಪ್ರತಿವಾದಿ 4 ಮತ್ತು 5 ರವರಿಗೆ ಪಾಲು ಹೋಗುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾನಪತ್ರದಲ್ಲಾಗಲೀ ಸೆಟಲ್‌ಮೆಂಟ್‌ಡೀಡ್‌ನಲ್ಲಾಗಲೀ ಎಲ್ಲಿಯೂ ಕೂಡ ದೊಡ್ಡ ಲಕ್ಷ್ಮಮ್ಮ ಅಥವಾ ಚಿಕ್ಕಲಕ್ಷ್ಮಮ್ಮ ಎನ್ನುವ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ.

ಬೈರಪ್ಪನ ಮಗ ಮುನಿಯಪ್ಪನಿಗೆ ಯಾವುದೇ ಸಂತತಿ ಇಲ್ಲ ಎಂದರೆ ಸರಿ. ಬೈರಪ್ಪನ ಮಗ ಮುನಿಯಪ್ಪನನ್ನು ಮುನಿಸ್ವಾಮಿ ಮಗಳು ಲಕ್ಷ್ಮಮ್ಮ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಲಕ್ಷ್ಮಮ್ಮ ಮುನಿಯಪ್ಪನನ್ನು ನೋಡಿಕೊಳ್ಳುತ್ತಿದ್ದರಿಂದ ಮುನಿಯಪ್ಪರವರು ದಿನಾಂಕ 09.12.1974 ರಂದು ಸೆಟಲ್‌ಮೆಂಡ್‌ಡೀಡ್‌ನಲ್ಲಿ ಬಂದ ಆಸ್ತಿಗಳನ್ನು ಗಿಫ್ಟ್‌ಡೀಡ್ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಆಸ್ತಿಗಳೇ ದಾವಾ ಆಸ್ತಿ 1 ರಿಂದ 9 ಎಂದರೆ ಸರಿಯಲ್ಲ. ದಾನಪತ್ರ ಮಾಡಿ ಆಸ್ತಿಯನ್ನು ಅವರ ಸುಪರ್ದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಯುವವರೆಗೆ ಲಕ್ಷ್ಮಮ್ಮ ಸ್ವಾದೀನದಲ್ಲಿದ್ದು ಅವರು ತೀರಿಕೊಂಡ ನಂತರ ನಂಜಮ್ಮ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವೇ ಸ್ವಾಧೀನದಲ್ಲಿರುವುದು ಎಂದು ಹೇಳುತ್ತಾರೆ. ನಾವು ಸ್ವಾಧೀನದಲ್ಲಿರುವ ಕುರಿತು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ಪವತಿ ವಾರಸು ಮುಖಾಂತರ ಎಲ್ಲಾ ದಾಖಲೆಗಳು ನಂಜಮ್ಮನ ಹೆಸರಿನಲ್ಲಿ ಬರುತ್ತಿವೆ ಎಂದರೆ ಸರಿ ಸಾಕ್ಷಿ ಮುಂದುವರೆದು ಪೋರ್ಜರಿ ಮಾಡಿ ಮಾಡಿಕೊಂಡಿರುತ್ತಾರೆ ಎಂದು

ಹೇಳುತ್ತಾರೆ. ಐಟಂ ನಂ.1 ರಿಂದ 9 ರಲ್ಲಿ ನನಗಾಗಲೀ ವಾದಿಯರಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾರಾಯಣಸ್ವಾಮಿಯವರು ಏನು ವ್ಯವಹಾರ ಮಾಡುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.